ಗಡಿ ಪ್ರದೇಶ ಜಿಲ್ಲೆಗಳ ಅಭಿವೃದ್ಧಿ

1511 (1747) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗಡಿ ಪ್ರದೇಶಗಳ ಜಿಲ್ಲೆಗಳಾವುವು;

ಆ) 1996-97, 1997-98, 1998-99ನೇ ಸಾಲುಗಳಲ್ಲಿ ಈ ಜಿಲ್ಲೆಗಳಿಗೆ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣವೆಷ್ಟು, ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಾಡಿದ ಹಣಷ್ಟು.

ಇ) ಗಡಿ ಪ್ರದೇಶ ಅಭಿವೃದ್ಧಿಗೆ ಹಾಕಿಕೊಂಡ ಯೋಜನೆಗಳಾವುವು.

ಈ) ಈ ಗಡಿ ಪ್ರದೇಶದಲ್ಲಿ ಕನ್ನಡ ಅಭಿವೃದ್ಧಿಗೆ ತೆಗೆದುಕೊಂಡ ಯೋಜನೆಗಳಾವುವು.

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :

ಅ) ಬೆಂಗಳೂರು (ಗ್ರಾ), ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ, ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬಿಜಾಪುರ, ಬೆಳಗಾಂ, ರಾಯಚೂರು, ಬಳ್ಳಾರಿ, ಬೀದರ್, ಗುಲ್ಬರ್ಗಾ.

ಆ)

ಕೋಟಿ ರೂ.ಗಳಲ್ಲಿ

ಸಾಲು	ಆಯವ್ಯಯ	ಬಿಡುಗಡೆ	ವೆಚ್ಚ
1996-97	12.50	8.72	8.59
1997-98	12.50	7.25	6.85
1998-99	10.00	5.90	4.09

ಇ) ರಸ್ತೆ, ಸೇತುವೆ, ಶಾಲಾ ಕಟ್ಟಡಗಳು, ಗ್ರಾಮೀಣ, ನೀರು ಸರಬರಾಜು, ಆರೋಗ್ಯ ಕಟ್ಟಡಗಳು, ಅಂಗನವಾಡಿ ಕಟ್ಟಡ, ಇತ್ಯಾದಿ.

ಈ) ಗಡಿನಾಡು ಕನ್ನಡಿಗರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಾಧಿಕಾರ ಈಗಾಗಲೇ ತಜ್ಞರ ಸಭೆ ನಡೆಸಿದೆ. ಅಲ್ಲಿನ ಕನ್ನಡ ಶಾಲೆಗಳ ಸ್ಥಿತಿಗತಿಗಳನ್ನು ಸುಧಾರಿಸುವ ಮತ್ತು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಾಣ ಮಾಡುವ ಬಗ್ಗೆ ಸಂಬಂಧಿಸಿದ ಇಲಾಖೆಗಳೊಡನೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಧಾರವಾಡ ನಗರದಲ್ಲಿ ಗ್ರಂಥಾಲಯ ಪ್ರಾರಂಭ

1512 (1750) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?